ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.

ಸಿಸಿ ನಂಬರ್ **987 /2023**

| | | |
|---|---|---|
| ಸಾಕ್ಷಿಯ ಹೆಸರು | : ಶಿವಕುಮಾರ | ಸಿ.ಡಬ್ಲ್ಯು 1 |
| ತಂದೆಯ ಹೆಸರು | : ರಂಗಪ್ಪ | ಪಿ.ಡಬ್ಲ್ಯು 1 |
| ವಯಸ್ಸು | : 32 ವರ್ಷ | |
| ಉದ್ಯೋಗ | : ಚಾಲಕ | |
| ವಾಸ ಸ್ಥಳ | : ಹುಣಸಘಟ್ಟ | |

ದಿನಾಂಕಃ**03-12-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-

ಚಾಸಾ-2 ರಿಂದ 13 ರವರ ಪರಿಚಯ ಇರುತ್ತದೆ. ಮೃತ ಶ್ರೀನಿವಾಸ್ ಈತನು ನನ್ನ ದೊಡ್ಡಪ್ಪನ ಮಗ ಇರುತ್ತಾನೆ. ಕಳೆದ ವರ್ಷ ಮಾರ್ಚ್ ತಿಂಗಳಲ್ಲಿ ಆದ ರಸ್ತೆ ಅಪಘಾತದಲ್ಲಿ ಆತನು ಮರಣ ಹೊಂದಿರುತ್ತಾನೆ. ಸದರಿ ಅಪಘಾತವು ತರೀಕೆರೆಯ ನಗರದ ಪೊಲೀಸ್ ಠಾಣೆಯ ಮುಂಭಾಗದಲ್ಲಿ ಆಗಿರುತ್ತದೆ. ಅಪಘಾತವನ್ನು ನಾನು ನೋಡಿಲ್ಲ. ಚಾಸಾ-13 ರವರು ಅಪಘಾತದ ವಿಷಯವನ್ನು ನನಗೆ ತಿಳಿಸಿರುತ್ತಾರೆ. ನಾನು ವಿಷಯ ತಿಳಿದು ನೇರವಾಗಿ ಆಸ್ಪತ್ರೆಗೆ ಹೋಗಿರುತ್ತೇನೆ. ನಾನು ಅಲ್ಲಿಗೆ ಹೋದಾಗ ಶ್ರೀನಿವಾಸ್ ಈತನು ತೀರಿಕೊಂಡಿದ್ದನು. ಈ ಬಗ್ಗೆ ನಾನು ದೂರನ್ನು ಕೊಟ್ಟಿರುತ್ತೇನೆ. ಎರಡು ದಿನಗಳ ನಂತರ ಅಪಘಾತಪಡಿಸಿದ ವಾಹನ ಟಿಪ್ಪರ್ ಲಾರಿ ಇರುತ್ತದೆ ಎಂದು ನನಗೆ ಗೊತ್ತಾಯಿತು. ದೂರನ್ನು ನಿ.ಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-1(ಎ) ಎಂದು ಗುರುತಿಸಲಾಯಿತು. ದಿಃ05-03-2023 ರಂದು ಪೊಲೀಸರು ಸ್ಥಳಕ್ಕೆ ಬಂದ ಪಂಚನಾಮೆ ಮಾಡಿದ್ದಾರೆ. ಆ ಸಮಯದಲ್ಲಿ ಪೋಟೋ ಕೂಡ ತೆಗೆದಿದ್ದಾರೆ. ಪಂಚನಾಮೆಯನ್ನು ನಿ.ಪಿ-2, ಪೊಟೋವನ್ನು ನಿ.ಪಿ-3 ಎಂದು ಗುರುತಿಸಲಾಯಿತು. ಈಗ ಭಾವಚಿತ್ರದಲ್ಲಿ ಕಾಣಿಸುತ್ತಿರುವ ಲಾರಿಯನ್ನೇ ಪೊಲೀಸರು ನನಗೆ ತೋರಿಸಿದ್ದಾರೆ. ಪೋಟೋವನ್ನು ನಿ.ಪಿ-4 ಎಂದು ಗುರುತಿಸಲಾಯಿತು. ಚಾಲಕನನ್ನು ಪೊಲೀಸರು ನನಗೆ ತೋರಿಸಿಲ್ಲ ಮತ್ತು ಆತನನ್ನು ನಾನು ನೋಡಿಲ್ಲ. ನಾನು ಪೊಲೀಸರಿಗೆ ಯಾವುದೇ ಮರುಹೇಳಿಕೆ ಕೊಟ್ಟಿರವುದಿಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರವರಿಂದಃ

ಪೊಲೀಸರು ಬರೆದು ಇಟ್ಟಿದ್ದ ದೂರಿಗೆ ನಾನು ಸಹಿ ಮಾತ್ರ ಹಾಕಿದ್ದೇನೆ ಎಂದರೆ ಸರಿ. ಅಪಘಾತದ ಸ್ಥಳವನ್ನೂ ಕೂಡ ಪೊಲೀಸರೇ ತೋರಿಸಿದ್ದರೆ ಎಂದರೆ ಸರಿ. ಪೊಲೀಸರೇ ನನಗೆ ಅಪಘಾತಪಡಿಸಿದೆ ಎನ್ನಲಾಗುವ ವಾಹನವನ್ನು ತೋರಿಸಿದ್ದಾರೆ ಎಂದರೆ ಸರಿ, ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ.

**ಮರುವಿಚಾರಣೆಃ ಇರುವುದಿಲ್ಲ .**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.

ಸಿಸಿ ನಂಬರ್ **/202**

| | | | |
|---|---|---|---|
| ಸಾಕ್ಷಿಯ ಹೆಸರು | : | | ಸಿ.ಡಬ್ಲ್ಯು |
| ತಂದೆಯ ಹೆಸರು | : | | ಪಿ.ಡಬ್ಲ್ಯು |
| ವಯಸ್ಸು | : | ವರ್ಷ | |
| ಉದ್ಯೋಗ | : | | |
| ವಾಸ ಸ್ಥಳ | : | | |

ದಿನಾಂಕಃ**04-10-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-

ನಾನು 2019 ರಿಂದ 2024 ರವರೆಗೆ

(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದ

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

ಮರುವಿಚಾರಣೆ **:** ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.